# ಪೋಸ್ಟರ್ ಜೊತೆ ಸೆಲ್ಫಿ ತಗೊಂಡಿದ್ದೆ

**ದೀಪಕ್ ಉದಯದ ‘ನಿನ್ನಿಂದಲೇ’ಯ ವರುಣ್**



◆ **‘ನಿನ್ನಿಂದಲೇ’ ಏನಾಗುತ್ತಿದೆ? ಏನಾಗಬೇಕು?**

ಅನನ್ಯಾ ಪ್ರೀತಿ ಮಾಡುತ್ತಿದ್ದಾಳೆ. ನಮ್ಮದು ರಕ್ತಸಂಬಂಧಿ ಕುಟುಂಬ. ಅವರ ತಾಯಿ ನಮ್ಮ ಸೋದರತ್ತೆ. ನನ್ನ ಅಪ್ಪ– ಅತ್ತೆ ನಡುವೆ ಬಲವಾದ ಕಾರಣಕ್ಕೆ ವೈಮನಸ್ಸು ಉಂಟಾಗಿ ಕುಟುಂಬಗಳು ದೂರವಾಗಿವೆ. ಆಕೆಗೆ ನಮ್ಮ ಕುಟುಂಬಗಳನ್ನು ಬೆಸೆಯುವ ಆಸೆ. ಅದಕ್ಕೇ ಅವಳು ನಮ್ಮ ಪ್ರೀತಿ ನಮ್ಮ ಪೋಷಕರ ಪ್ರೀತಿಯ ಸಂಬಧವನ್ನು ಒಂದಾಗಿಸುತ್ತದೆ ಅದಕ್ಕೆ ಆಕೆ ‘ನಿನ್ನಿಂದಲೇ’ ಎನ್ನುವ ಅಭಿಮತವನ್ನು ವ್ಯಕ್ತಪಡಿಸುತ್ತಾಳೆ.

◆ **ಕಿರುತೆರೆಯ ನಂತರ ಆದ ಬದಲಾವಣೆ ಏನು?**

ನನ್ನಲ್ಲಿ ಹೇಳುವಂತಹ ಬದಲಾವಣೆ ಆಗಿಲ್ಲ. ಮೊದಲಿನಿಂದಲು ಇದ್ದಂತೆಯೇ ಈಗಲೂ ಇದ್ದೇನೆ. ಇದೇ ಕಾರಣಕ್ಕೆ ಕೆಲ ಸ್ನೇಹಿತರು ಅಚ್ಚರಿಯನ್ನು ವ್ಯಕ್ತಪಡಿಸುತ್ತಾರೆ. ಬೇರೆ ನಟರ ಪರಿಚಯ ಇದ್ದವರು ನೀನು ತುಂಬ ಸರಳ ಎನ್ನುತ್ತಾರೆ. ಆ ರೀತಿ ನನಗೆ ಅನಿಸುವುದಿಲ್ಲ. ಜನದಟ್ಟಣೆ ಇರುವ ಸ್ಥಳಗಳಲ್ಲಿ ಹೋಗಲು ಕೆಲವರು ನಿರ್ಬಂಧವನ್ನು ಹಾಕಿಕೊಳ್ಳುತ್ತಾರಂತೆ. ನನಗೆ ಆ ಮಿತಿಗಳು ಇಲ್ಲ. ಸಾರ್ವಜನಿಕವಾಗಿ ಯಾರಾದರೂ ಮಾತನಾಡಿದರೆ ಖುಷಿ ಆಗುತ್ತದೆ. ಗೊತ್ತಿಲ್ಲದೆ ಪ್ರೀತಿ ಇದ್ದವರ ನಟನೊಬ್ಬನಿಗೆ ಸಿಗುವ ಉಡುಗೊರೆ ಎಂದು ನಾನು ಭಾವಿಸಿದ್ದೇನೆ. ಮೊದಲು ನಾನು ಕೆಲಸ ಮಾಡುತ್ತಿದ್ದೆ. ಅಲ್ಲಿನ ಕೆಲಸವೇ ಭಿನ್ನ, ಕಂಪ್ಯೂಟರ್ ಎದುರು ಕುಳಿತು ವಿದೇಶದ ಇನ್ನಾರದೋ ಜೊತೆ ವ್ಯವಹರಿಸಬೇಕಾಗುತ್ತಿತ್ತು. ಇಲ್ಲಿ ಪರಿಚಯಸ್ಥರ ನಡುವೆ ಕೆಲಸ ಮಾಡುತ್ತೇನೆ. ಕಲಿಯುವುದು ಜಾಸ್ತಿ ಇದೆ. ಎಲ್ಲಕ್ಕಿಂತ ನಟನೆ ನನಗೆ ಹೊಸ ಅನುಭವ. ಅದಕ್ಕಾಗಿ ಪೂರ್ವ ತಯಾರಿಯನ್ನು ಮಾಡಿಲ್ಲ. ನಿರ್ದೇಶಕರು ಒಂದು ದೃಶ್ಯವನ್ನು ಹೇಗೆ ಕಲ್ಪಿಸಿಕೊಂಡಿರುತ್ತಾರೆಯೋ ಹಾಗೆಯೇ ಬರಬೇಕು. ಅದನ್ನು ನಮ್ಮಿಂದ ಅವರು ತೆಗೆಯುತ್ತಾರೆ ಅಂದರೆ ನಾವು ಅದನ್ನು ಅರ್ಥ ಮಾಡಿಕೊಳ್ಳಲು ಶ್ರಮಿಸಬೇಕು. ಅವರ ಚಿಂತನೆ ತೆರೆಯಲ್ಲಿ ಕಾಣಿಸುವುದಿಲ್ಲ, ಅದನ್ನು ನಾವು ತೋರಿಸಬೇಕಾಗುತ್ತದೆ. ಕ್ಯಾಮೆರಾ ಕೂಡ ಅದೇ ರೀತಿ ಕೆಲಸ ಮಾಡುತ್ತದೆ. ಸಿನಿಮಾಟೊಗ್ರಾಫರ್‌ಗಳಿಗೆ ಆಳವಾದ ತಿಳಿವಳಿಕೆ ಇರುತ್ತದೆ. ತೆರೆ ಕಾಣುವ ಮುನ್ನವೇ ಅವರು ದೃಶ್ಯದ ಸಾಧ್ಯತೆಯನ್ನು ಹೇಳುತ್ತಾರೆ. ಅವರನ್ನೂ ನಾವು ತಲುಪಬೇಕು ಎಂದರೆ ಶಿಸ್ತು ತುಂಬ ಮುಖ್ಯ. ಒಬ್ಬರಿಂದ ಆಗುವ ಕೆಲಸ ಇದಲ್ಲ. ಕೆಲಸ ಆರಂಭಿಸಿದಾಗ ಓದಿದ್ದು ಮುಗಿದು ಹೋಯ್ತು ಎಂದುಕೊಂಡಿದ್ದೆ. ಇಲ್ಲಿಗೆ ಬಂದ ನಂತರ ಓದು ನಿರಂತರ ಎನ್ನುವುದು ಅರಿವಿಗೆ ಬಂತು. ಪ್ರತಿ ದೃಶ್ಯವನ್ನೂ ಮೈಯೆಲ್ಲಾ ಕಣ್ಣಾಗಿ ಓದಬೇಕಾಗುತ್ತದೆ. ಎಲ್ಲ ರೀತಿಯ ಸಿನಿಮಾಗಳನ್ನು ಈಗ ನೋಡುತ್ತಿದ್ದೇನೆ. ಮೊದಲು ಈ ಪ್ರಮಾಣದಲ್ಲಿ ನೋಡ್ತಿರಲಿಲ್ಲ.

◆ **ನಿಮ್ಮ ದೊಡ್ಡ ಕಟೌಟ್ ನೋಡುವ ಆಸೆ ಹುಟ್ಟಿದ್ದು ಇದೆಯಾ?**

ಓದು ಮುಗಿಸಿ ಕೆಲಸ ಮಾಡುತ್ತಿದ್ದೆ. ‘ನಾ ನಿನ್ನ ಬಿಡಲಾರೆ’ ನನ್ನ ಮೊದಲ ಧಾರಾವಾಹಿ ಆರಂಭವಾಗಿತ್ತು. ಒಮ್ಮೆ ರಾತ್ರಿ ಪಾಳಿ ಮುಗಿಸಿ ಬೆಳಿಗ್ಗೆ 5.30ರ ಹೊತ್ತಿಗೆ ಮನೆಗೆ ಹೊರಟಿದ್ದೆ. ಬೆಂಗಳೂರಿನ ಆರ್ಮುಗಂ ವೃತ್ತದ ಬಳಿ ಅದರ ದೊಡ್ಡ ಪೋಸ್ಟರ್ ನೋಡಿದೆ. ಅರೇ ನನ್ನ ಪೋಸ್ಟರ್ ಎಂದು ಬೆರಗಾದೆ. ಸೆಲ್ಫಿ ತೆಗೆದುಕೊಂಡೆ, ಪಟಾಪಟಾ ಫೋಟೊ ತೆಗೆದುಕೊಂಡೆ. ಆ ಕ್ಷಣ ಮಾತು ಹೊರಡುವಂತೆ ಇರಲಿಲ್ಲ. ಸುತ್ತ ಕತ್ತಲು ಪೋಸ್ಟರ್ ಮೇಲೆ ಬೆಳಕಿದೆ. ಅಂದು ರೋಮಾಂಚನ ಅನುಭವಿಸಿದೆ. ಮನೆಗೆ ಬಂದು ಮಲಗಿದೆ. ಮಧ್ಯಾಹ್ನ ಒಂದು ಗಂಟೆಗೆ ಎದ್ದು ನೋಡಿದರೆ ಫೋನಿನಲ್ಲಿ ಸಿಕ್ಕಾಪಟ್ಟೆ ಸಂದೇಶಗಳು. ಮಿಸ್ ಕಾಲ್‌ಗಳು, ನಿನ್ನ ಪೋಸ್ಟರ್ ಅಲ್ಲಿ ನೋಡಿದೆ ಇಲ್ಲಿ ನೋಡಿದೆ ಎಂದು ಫೋಟೊ– ವಿಡಿಯೊಗಳು ತುಂಬಿದ್ದವು. ಅಲ್ಲಿಯವರೆಗೆ ಆ ಮಟ್ಟದ ಅಭಿನಂದನೆ– ಶುಭಾಶಯ ಸಂದೇಶಗಳು ಒಮ್ಮೆಯೂ ಬಂದಿರಲಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲೂ ಗೆಳೆಯರು ಪ್ರಕಟಿಸಿದ್ದರು.

◆ **ಸಿನಿಮಾ ಕನಸಿನ ಬಗ್ಗೆ ಹೇಳುವುದಾದರೆ...**

ಸಿನಿಮಾ ಇನ್ನೂ ಶುರು ಮಾಡಿಲ್ಲ. ತುಂಬ ಕಥೆಗಳನ್ನು ಕೇಳಿದ್ದೇನೆ. ಕಳೆದ ವರ್ಷ ಎರಡು ಸಿನಿಮಾಗಳ ನಿರ್ಮಾಣಕ್ಕೆ ನಿರ್ದೇಶಕರು ಗಂಭೀರವಾಗಿ ಯೋಚಿಸಿದ್ದರು. ಆದರೆ ಕೊರೊನಾ ಕಾರಣಕ್ಕೆ ಯಾವುದೂ ಕೈಗೂಡಲಿಲ್ಲ. ನನಗೆ ನಿಗೂಢ– ಥ್ರಿಲ್ಲರ್ ಕಥೆಗಳು ಇಷ್ಟ. ಅಂತಹ ಸಿನಿಮಾ ನೋಡಿದಾಗ ನನಗೂ ಇಂತಹ ಒಂದೇ ಒಂದು ಸಿನಿಮಾ ಸಿಕ್ಕರೆ ಸಾರ್ಥಕ ಎಂದುಕೊಳ್ಳುತ್ತೇನೆ. ವೀಕ್ಷಕರ ನಿರೀಕ್ಷೆ ಏನಿದೆ? ಇವತ್ತಿನ ಟ್ರೆಂಡ್ ಏನು? ಇದೆಲ್ಲ ಮುಖ್ಯ ಆಗುತ್ತದೆ. ಅದಕ್ಕೆ ತಕ್ಕಂತೆ ಮೊದಲು ಅವರಿಗೆ ಇಷ್ಟ ಆಗುವಂತೆ ಮಾಡಬೇಕು. ಆದ ಮೇಲೆ ನಮ್ಮ ಆಸೆಯನ್ನು ವ್ಯಕ್ತಪಡಿಸಬೇಕು. ನಂತರ ನಮ್ಮ ಬಯಕೆ ಕಡೆ ಗಮನ ಕೊಡಬೇಕು. ಸಿನಿಮಾದಲ್ಲಿ ಒಳ್ಳೆಯ ಹಾಡುಗಳು ಇರಬೇಕು. ಅದೇ ಜನರ ಹತ್ತಿರ ತೆಗೆದುಕೊಂಡು ಹೋಗುತ್ತದೆ.

■ **ರಾಘವೇಂದ್ರ ಕೆ.**